ನವೋದಯ ಕಾವ್ಯದ ಮೇಲೆ ವಚನಗಳ ಪ್ರಭಾವ

ವಿಶ್ವನಾಥ ಜಿ.*

DOI: https://doi.org/10.5281/zenodo.21438312

ABSTRACT

12ನೇ ಶತಮಾನದ ಬಸವಾದಿ ಶರಣರ ವಚನ ಸಾಹಿತ್ಯವು ಆಧುನಿಕ ಕನ್ನಡದ ನವೋದಯ ಕಾವ್ಯದ ಮೇಲೆ ಬೀರಿದ ಅಗಾಧ ಪ್ರಭಾವವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕುವೆಂಪು ಅವರ 'ಕಿಂಕಿಣಿ', ದ.ರಾ. ಬೇಂದ್ರೆಯವರ 'ಕರುಳಿನ ವಚನಗಳು' ಹಾಗೂ 'ನಾಕುತಂತಿ', ಮಧುರಚೆನ್ನರ 'ನನ್ನನಲ್ಲ', ವಿ.ಕೃ. ಗೋಕಾಕರ ಮುಕ್ತಛಂದಸ್ಸಿನ ಪ್ರಯೋಗಗಳ ಮೇಲೆ ವಚನಗಳ ತಾತ್ವಿಕತೆ, ಭಾಷೆ, ಲಯ ಮತ್ತು ಅನುಭಾವ ಹೇಗೆ ಗಾಢವಾಗಿ ಕೆಲಸ ಮಾಡಿದೆ ಎಂಬುದನ್ನು ಸೋದಾಹರಣವಾಗಿ ಚರ್ಚಿಸಲಾಗಿದೆ. ಕೇವಲ ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯದ ಪ್ರೇರಣೆಯಲ್ಲದೆ, ಅಪ್ಪಟ ದೇಶೀಯ ನೆಲೆಯ ವಚನ ಪರಂಪರೆಯು ನವೋದಯದ ಪ್ರಮುಖ ಕವಿಗಳ ಅಭಿವ್ಯಕ್ತಿ ಮಾಧ್ಯಮವಾಗಿ, ಹೊಸ ಕಾವ್ಯಮಾರ್ಗ ಮತ್ತು ಮುಕ್ತಛಂದಸ್ಸಿನ ಆವಿಷ್ಕಾರಕ್ಕೆ ಹೇಗೆ ಮೂಲ ಪ್ರೇರಕಶಕ್ತಿಯಾಯಿತು ಎನ್ನುವುದನ್ನು ಸಾಹಿತ್ಯಿಕ ವಿಮರ್ಶೆಗಳ ಹಿನ್ನೆಲೆಯಲ್ಲಿ ನಿರೂಪಿಸಲಾಗಿದೆ. ವಚನಗಳ ಸಾಮಾಜಿಕ ಕಳಕಳಿ ಹಾಗೂ ಅಧ್ಯಾತ್ಮಿಕ ನಿಲುವುಗಳು ಆಧುನಿಕ ಕವಿಗಳ ಸೃಜನಶೀಲತೆಗೆ ದಾರಿದೀಪವಾದ ಬಗೆಯನ್ನು ಇದು ಸ್ಪಷ್ಟಪಡಿಸುತ್ತದೆ.

KEYWORDS: ನವೋದಯ ಕಾವ್ಯ, ವಚನ ಸಾಹಿತ್ಯ, ಮುಕ್ತಛಂದಸ್ಸು, ಅನುಭಾವ, ದೇಶೀಯ ಪರಂಪರೆ.

* **ವಿಶ್ವನಾಥ ಜಿ.,** ಸಂಶೋಧನಾ ವಿದ್ಯಾರ್ಥಿ, ಎಂ.ಎಂ. ಕಲಬುರ್ಗಿ ಸಂಶೋಧನಾ ಕೇಂದ್ರ, ಜಗದ್ಗುರು ತೋಂಟದಾರ್ಯ ಮಠ, ಗದಗ.

12ನೇ ಶತಮಾನದ ಬಸವಾದಿ ಶಿವಶರಣರಿಂದ ರಚನೆಗೊಂಡ ವಚನಸಾಹಿತ್ಯ ಕನ್ನಡ ಸಾಹಿತ್ಯಿಕ-ಸಾಂಸ್ಕೃತಿಕ-ಸಾಮಾಜಿಕ-ಧಾರ್ಮಿಕ ಕ್ಷೇತ್ರದಲ್ಲಿ ಮಾಡಿದ ಪ್ರಭಾವ-ಪರಿಣಾಮ ಅನೂಹ್ಯವಾದುದು. ಒಂದು ಸಾಹಿತ್ಯ ಪ್ರಕಾರ ಎಲ್ಲ ಆಯಾಮಗಳಲ್ಲಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡದ್ದು ವಚನಸಾಹಿತ್ಯದ ಘಟ್ಟದಲ್ಲಿಯೇ ಎಂಬುದು ಗಮನಾರ್ಹ ಸಂಗತಿಯಾಗಿದೆ. ಪಂಪ-ರನ್ನ ಮೊದಲಾದವರು ಉತ್ತರ ಭಾರತದ ಆರ್ಯೀಕರಣದ ಮಹಾಭಾರತ ಕಥಾಪಾತ್ರಗಳೊಂದಿಗೆ ತಮ್ಮನ್ನು ಗೌರವಿಸಿದ ರಾಜ-ಸಾಮಂತರನ್ನು ಹೋಲಿಸಿ ಕಾವ್ಯಗಳನ್ನು ಬರೆದರು. ಹೀಗಾಗಿ ಪಂಪನ ಕಾಲದ ಸಾಹಿತ್ಯವನ್ನು ವೀರಯುಗವೆಂದು ಕರೆಯಲಾಯಿತು. ನಂತರ 12ನೇ ಶತಮಾನದಲ್ಲಿ ರೂಪಗೊಂಡ ವಚನ ಸಾಹಿತ್ಯ ರಾಜಾಶ್ರಯದಿಂದ ಜನಸಾಮಾನ್ಯರ ಹತ್ತಿರ ಬಂದಿತು. ಯಾಕೆಂದರೆ ವಚನಗಳನ್ನು ರಚಿಸಿದ ಬಹುತೇಕರು ಜನಸಾಮಾನ್ಯರೇ ಆಗಿದ್ದರು. ವಚನಸಾಹಿತ್ಯದ ಘಟ್ಟವನ್ನು ಭಕ್ತಿಯುಗವೆಂದು ಕರೆಯಲಾಯಿತು. ವಚನಗಳ ಮೂಲವನ್ನು ಎಂ. ಚಿದಾನಂದಮೂರ್ತಿ ಅವರು ತ್ರಿಪದಿಯಲ್ಲಿ, ಎಂ.ಎಂ. ಕಲಬುರ್ಗಿ ಅವರು ನಾಥಪಂಥದ ಸಾಹಿತ್ಯದಲ್ಲಿ, ಇನ್ನೂ ಕೆಲವು ವಿದ್ವಾಂಸರು ತಮಿಳುನಾಡಿನ ತೇವಾರಂ ಮೊದಲಾದ ಸಾಹಿತ್ಯದಿಂದ ಪ್ರೇರಣೆಗೊಂಡಿರಬಹುದೆಂದು ಊಹಿಸಿದ್ದಾರೆ. ಆದರೆ ದೇವವಾಣಿ ಜನವಾಣಿಯಾಗದೇ ಇದ್ದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೆ ಏರಿಸಿದ ಪವಾಡ ವಚನಕಾರರದು ಎಂಬ ಬಸವನಾಳರ ನುಡಿ, ಎಂ. ಆರ್. ಶ್ರೀ ಅವರು ವಚನಗಳು ಕನ್ನಡದ ಸ್ವಯಾರ್ಜಿತ ಸಂಪತ್ತು ಎಂದು ವಚನಧರ್ಮಸಾರದಲ್ಲಿ ಹೇಳಿದ ಮಾತುಗಳಿಂದ ವಚನಗಳು ಸ್ವಯಂ ಸೃಷ್ಟಿ ಎಂಬುದನ್ನು ಮನಗಾಣಬಹುದು.

ಆಧುನಿಕ ಕನ್ನಡ ಸಾಹಿತ್ಯದ ಮೇಲೆ ವಚನಗಳು ಮಾಡಿದ ಪ್ರಭಾವ ಅನನ್ಯವಾದುದು. ನವೋದಯ, ನವ್ಯ, ಬಂಡಾಯ ಕಾವ್ಯಗಳ ಮೇಲೆ ವಚನಗಳ ಪ್ರಭಾವ ನೇರವಾಗಿ ಆಗಿರುವುದನ್ನು ಗುರುತಿಸಬಹುದು. ನವೋದಯ ಕಾವ್ಯದ ಘಟ್ಟವನ್ನು ಕ್ರಿ. ಶ. 1920ರಿಂದ 1950ರ ದಶಕದವರೆಗೆ ಎಂದು ವಿಮರ್ಶಕರು ಗುರುತಿಸಿದ್ದಾರೆ. ಈ ಕಾಲದಲ್ಲಿಯೇ ವಚನಗಳ ಪ್ರಕಟಣೆ ಕಾರ್ಯವೂ ಪ್ರಾರಂಭವಾಯಿತು. ಆದರೆ ನವೋದಯ ಕಾಲ ಘಟ್ಟದ ವಿದ್ವಾಂಸರು ವಚನಗಳನ್ನು ಸಾಹಿತ್ಯ ಪ್ರಕಾರವೆಂದು ಗುರುತಿಸಲಿಲ್ಲವೆಂಬುದು ಅಷ್ಟೇ ಆಶ್ಚರ್ಯಕರ ವಿಷಯವಾಗಿದೆ.

ನವೋದಯ ಕಾಲದ ಅತ್ಯಂತ ಪ್ರಮುಖ ಕವಿಗಳಾದ ಕುವೆಂಪು ಅವರು 'ವಚನಕಾರ ಬಸವೇಶ್ವರ' ಎಂಬ ಲೇಖನದಲ್ಲಿ "ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾವು ಇದಿರುಗೊಳ್ಳುವ ದ್ವಿತೀಯ ನವೋದಯಕ್ಕೆ ಸ್ಫೂರ್ತಿಪ್ರಭಾಪ್ರತಿಮರಾಗಿರುವ ಹಿರಿಯ ವ್ಯಕ್ತಿ ಬಸವೇಶ್ವರರು. ಅಂದು ಕನ್ನಡ ನಾಡಿನ ಕರ್ಮಭೂಮಿಕೆಯಲ್ಲಿ ಅವರ ಪ್ರಬುದ್ಧಚೇತನ ಸಂಮಥಿಸಿ ಹೊಮ್ಮಿಸಿದ ತೆರೆತೆರೆಯ ಆಂದೋಲನಗಳಲ್ಲಿ ಮೂರ್ತಿಮತ್ತಾಗಿದೆ ನಾವು ಗುರುತಿಸಬಹುದಾದ ಆ ಕಾಲದ ಯುಗಶಕ್ತಿ"[1] ಎಂದು ವರ್ಣಿಸುತ್ತಲೇ ವಚನಗಳು ಗದ್ಯಪ್ರಕಾರವೆಂದು ಭಾವಿಸುತ್ತಾರೆ. ಆದರೆ ಮುಂದುವರೆದು "ವೀರಶೈವಧರ್ಮಕ್ಕೆಂತೊ ಅಂತೆ ವಚನಸಾಹಿತ್ಯಕ್ಕೂ ಬಸವೇಶ್ವರರನ್ನು ಆಚಾರ್ಯಪುರುಷರೆಂದು ಪರಿಗಣಿಸಬಹುದು. ಆದರೆ ಅವರು ಪ್ರಧಾನವಾಗಿ ಆಚಾರ್ಯರು, ಗೌಣವಾಗಿ ವಚನಕಾರರು ಎಂಬುದನ್ನು ಮರೆಯಬಾರದು. ಅವರನ್ನು ವಚನಕಾರ ಮಾತ್ರರೆಂದು ಪರಿಭಾವಿಸಿದರೆ, ಮರವನ್ನು ಎಲೆಗಳನ್ನು ಸಿಕ್ಕಿಸಿಕೊಂಡಿರುವ ಕೋಲು ಎಂದು ವರ್ಣಿಸಿದಂತಾಗುತ್ತದೆ. ಅವರು ಸಾಹಿತಿಯಲ್ಲ. ಸಾಹಿತ್ಯ ಸೃಷ್ಟಿಮಾಡಲೆಂದು ಅವರು ವಚನ ರಚನೆಗೆ ಕೈ ಹಾಕಲಿಲ್ಲ. ಅವರ ವಚನಗಳೂ

ಅವರಂತೆಯೇ ಪ್ರಧಾನತಃ ಧರ್ಮಬೋಧನೆ ಮಾಡುವ ಪ್ರಭುಸಮ್ಮಿತಗಳು ಇಲ್ಲವೆ ಮಿತ್ರಸಮ್ಮಿತಗಳು; ರಸಾನುಭವದಾನ ಮಾಡುವ ಕಾಂತಾಸಮ್ಮಿತಗಳಲ್ಲ. ಅಲ್ಲಲ್ಲಿ ಸಾಹಿತ್ಯಾಂಶದಿಂದ ರಸಾನುಭವವನ್ನುಂಟು ಮಾಡುವವನಿತು ರಮಣೀಯವಾಗಿದ್ದರೂ ಅವು ಒಟ್ಟಿನಲ್ಲಿ ಶುದ್ಧ ಸಾಹಿತ್ಯಜಾತಿಗೆ ಸೇರುವುದಿಲ್ಲ.''[2]

1950ರ ಪೂರ್ವದಲ್ಲಿಯೇ (1949ರ ಪ್ರಬುದ್ಧ ಕರ್ನಾಟಕದಲ್ಲಿ ಈ ಲೇಖನ ಪ್ರಕಟವಾಗಿದೆ) ಕುವೆಂಪು ಅವರು ಈ ಮಾತುಗಳನ್ನು ಹೇಳಿದ್ದರೂ ಅವರ ಸಾಹಿತ್ಯ ವಿಮರ್ಶಕರಾರೂ ಈ ವಿಷಯವಾಗಿ ಮಾತನಾಡದಿರುವುದು ಇನ್ನೂ ಆಶ್ಚರ್ಯವಾಗಿದೆ. ಕುವೆಂಪು ಅವರ ಸಾಹಿತ್ಯ ಅವರ ಶಿಷ್ಯಂದಿರಿಂದ ಹೊಗಳಿಕೆಯ ಅತಿರೇಕದಿಂದಲೂ, ವಿಮರ್ಶಕ ವಲಯದ ಪೂರ್ವಾಗ್ರಹಪೀಡಿತ ದೃಷ್ಟಿಯಿಂದಲೂ ಅವಜ್ಞೆಗೊಳಗಾಗಿದೆ. ಹೀಗಾಗಿ ವಚನಗಳ ವಿಷಯವಾಗಿ ಕುವೆಂಪು ಅವರ ವಿಚಾರಕ್ಕೆ ಯಾರೂ ಪ್ರತಿಕ್ರಿಯೆ ನೀಡಲಿಲ್ಲ. ಆದರೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಮಾತ್ರ ಇದಕ್ಕೆ ಪ್ರತಿಕ್ರಿಯೆ ನೀಡುತ್ತ ``ಕುವೆಂಪು ಅವರ ಈ ನಿಲುವು ಅಷ್ಟು ಸಮಂಜಸವೆಂದು ತೋರುವುದಿಲ್ಲ. ಶುದ್ಧಸಾಹಿತ್ಯ ಜಾತಿಗೆ ಸೇರುವುದಿಲ್ಲ ಎಂಬ ಕಾರಣಕ್ಕೆ ವಚನ ಸಾಹಿತ್ಯ ಕುವೆಂಪು ಅವರ ಅಲಕ್ಷ್ಯಕ್ಕೆ ಗುರಿಯಾಯಿತೆಂದು ಭಾವಿಸುವುದಾದರೆ, ಕುವೆಂಪು ಅವರಿಗೆ ಪರಿಚಿತವಾದ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಶುದ್ಧಸಾಹಿತ್ಯದ ಜಾತಿಗೆ ಸೇರುವ ಕೃತಿಗಳು ಎಷ್ಟಿವೆ, ಎಂದು ಕೇಳಬೇಕಾಗುತ್ತದೆ.''[3]

ಕುವೆಂಪು ಅವರು ಸ್ವಾಮಿ ವಿವೇಕಾನಂದರ ಸಾಹಿತ್ಯವನ್ನು ಬಾಲ್ಯದಿಂದಲೂ ಓದುತ್ತ ಬಂದ ಪರಿಣಾಮವಾಗಿ ಅವರ ಕಾವ್ಯದಲ್ಲಿ ವರ್ಣವ್ಯವಸ್ಥೆ, ಜಾತಿಪದ್ಧತಿ ಖಂಡನೆ ಮೊದಲಾದ ಸಾಮಾಜಿಕ ಅನಿಷ್ಟಗಳ ವಿರುದ್ಧದ ಧ್ವನಿ ಕಾಣುತ್ತದೆ ಎಂದು ಜಿ.ಎಸ್. ಎಸ್. ಭಾವಿಸುತ್ತಾರೆ.

``ಶ್ರೀ ಅರವಿಂದರನ್ನೂ ಮತ್ತು ಅವರ ಅಭಿವ್ಯಕ್ತಿಯನ್ನೂ ತುಂಬ ಮೆಚ್ಚಿಕೊಳ್ಳುವ ಕುವೆಂಪು, ಬಯಲನ್ನು ರೂಪ ಮಾಡಿದಂತಿರುವ ಅಲ್ಲಮಪ್ರಭುವಿನ ಅಭಿವ್ಯಕ್ತಿಗಳನ್ನೂ ಹಾಗೆಯೆ ವಚನಕಾರರು ಮೊಟ್ಟಮೊದಲು ಕನ್ನಡ ಭಾಷೆಯನ್ನು ಅನುಭಾವದ ಭಾಷೆಯನ್ನಾಗಿ ಮಾಡಿ ಅದನ್ನು ಸೃಜನಾತ್ಮಕವಾಗಿ ಬಳಸಿದ ಕ್ರಮಗಳನ್ನೂ ಸರಿಯಾಗಿ ಗಮನಿಸಿದ್ದರೆ, ಖಂಡಿತವಾಗಿಯೂ ಅದರಿಂದ ಅವರ ಕಾವ್ಯಕ್ಕೆ ಪ್ರಯೋಜನವಾಗಬಹುದಾಗಿತ್ತು–ಎಂದು ಅನ್ನಿಸುತ್ತದೆ.''[4] ಎಂಬ ಜಿ.ಎಸ್.ಎಸ್. ಅವರ ಅಭಿಪ್ರಾಯ ಔಚಿತ್ಯಪೂರ್ಣವಾಗಿದೆ.

ಕುವೆಂಪು ಅವರು ತಮ್ಮ ಬದುಕಿನ ಕೊನೆಯ ಘಟ್ಟದಲ್ಲಿ ವಚನಗಳ ಕುರಿತು ಅಭಿಪ್ರಾಯಗಳನ್ನು ಸ್ವಲ್ಪ ಬದಲಾಯಿಸಿಕೊಂಡಂತೆ ಕಾಣುತ್ತದೆ. ಈ ಕುರಿತು ಸಂದರ್ಶನವೊಂದರಲ್ಲಿ ಅವರು ಹೇಳಿದ ಮಾತುಗಳು ಇಲ್ಲಿ ಉಲ್ಲೇಖಾರ್ಹವಾಗಿವೆ. ``ಉದ್ದೇಶ ಏನೇ ಇರಲಿ, ನೂತನ ಸಾಹಿತ್ಯಯುಗಕ್ಕೆ ಪ್ರೇರಕಶಕ್ತಿಯಾದ, ಎಂಟು ಶತಮಾನಗಳ ನಂತರವೂ ಮಾಸದ ಪ್ರಭಾವಳಿಯುಳ್ಳ ವಚನಸಾಹಿತ್ಯ ಕನ್ನಡ ಸಾಹಿತ್ಯ ಸರಸ್ವತಿಯ ಕಿರೀಟದ ಪ್ರೋಜ್ವಲರತ್ನವೆಂದೇ ಹೇಳಬೇಕಾಗಿದೆ'' (ಗಿರಡ್ಡಿ ಗೋವಿಂದರಾಜ : ಕಾವ್ಯವನ್ನು ಕುರಿತು ಪು.ಸಂ. 67)

ವಚನಗಳ ಬಗ್ಗೆ ಇಂಥ ದೃಷ್ಟಿಕೋನವನ್ನು ಹೊಂದಿದ್ದ ಕುವೆಂಪು 1946ರಲ್ಲಿ `ಕಿಂಕಿಣಿ' ಎಂಬ ಸಂಕಲನವೊಂದನ್ನು ಪ್ರಕಟಿಸಿದರು. ವಚನಗಳ ಭಾವ ಲಯ ಆಶಯವನ್ನು ಹೊಂದಿರುವ ಈ ಕವನಗಳನ್ನು ವಚನಕವನಗಳೆಂದು ವಿದ್ವಾಂಸರು ಗುರುತಿಸಿದ್ದಾರೆ. ಡಾ. ಹಾ.ಮಾ.ನಾಯಕರು ಅವರು ಈ ವಿಷಯವಾಗಿ ಬರೆಯುತ್ತಾ–

"ತಮ್ಮ ನಾನಾ ಬಗೆಯ ಕಾವ್ಯ ಪ್ರಯೋಗಗಳಲ್ಲಿ ಕುವೆಂಪು ಅವರು ವಚನಗಳನ್ನೂ ರಚಿಸಿದ್ದಾರೆ. ಕಿಂಕಿಣಿ ಎಂಬ ಕೃತಿಯಲ್ಲಿ ಅರುವತ್ತು ವಚನಗಳು ಸಂಕಲಿತವಾಗಿವೆ. 1946ರಲ್ಲಿ ಪ್ರಕಟವಾದ ಈ ಕೃತಿ ಮತ್ತೆ 1964ರಲ್ಲಿ ಅಚ್ಚಾಗಿದೆ. ಶುದ್ಧ ಕಾವ್ಯದ ದೃಷ್ಟಿಯಿಂದ ಈ ವಚನಗಳು ಕುವೆಂಪು ಅವರ ಉಳಿದ ಯಾವ ಕೃತಿಗಳಿಗೂ ಎರಡನೆಯವಲ್ಲ. ಆದರೂ ಅವರ ಬೇರೆ ಬೇರೆ ಕೃತಿಗಳಿಗೆ ಸಿಕ್ಕಿರುವ ವಿಮರ್ಶಕರ ಸ್ವಾಗತ, ಮನ್ನಣೆ ಕಿಂಕಿಣಿಗೆ ದೊರೆಯದಿರುವುದು ಆಶ್ಚರ್ಯದ ಮಾತು."[5]

ಕಿಂಕಿಣಿಯಲ್ಲಿ ಪ್ರಧಾನವಾಗಿ ಕಾಣಬರುವುದು ಪ್ರಕೃತಿಯ ರಮ್ಯ ಉಜ್ವಲ ವರ್ಣನೆ. ಕವಿಗೆ ಮಲೆನಾಡು, ಬೆಳಗಿನ ಸೂರ್ಯೋದಯ, ಮಾಗಿಯ ಮುಂಜಾನೆ, ಸೂರ್ಯಾಸ್ತ ಎಲ್ಲವೂ ಮನೋಹರವಾಗಿ ಕಂಡಿವೆ. ಸಹಜವಾದ ಸ್ವೋಪಜ್ಞಶೀಲ ಮನಸ್ಸಿನ ಕುವೆಂಪು ಅತ್ಯಂತ ಸೊಗಸಾಗಿ ಮಲೆನಾಡಿನ ಪ್ರಕೃತಿಯನ್ನು ವರ್ಣಿಸುತ್ತಾರೆ:

ಇಬ್ಬನಿ ತಬ್ಬಿದ ಮರದೆಲೆಗಳಿಂದ ಹನಿತೊಟ್ಟಿಕ್ಕುತ್ತಿದೆ.
ವಸಂತ ವಿಯೋಗದ ವಿರಹಯಾತನೆಯಿಂದ
ಶ್ವೇತವಸನ ಧಾರಿಣಿಯಾಗಿ ಅವಕುಂಠಿತೆಯಾದ
ವನರಮಣಿ ಕಂಬನಿಗರೆದು ನೀರವವಾಗಿ ರೋದಿಸುವಂತಿದೆ[6]

ಪ್ರಕೃತಿಯ ವರ್ಣನೆಯಂತೆ ದಾರ್ಶನಿಕ ಅನುಭಾವದ ದೃಷ್ಟಿಯು ಈ ವಚನಗಳಲ್ಲಿ ಪಡಿಮೂಡಿದೆ. ಭಗವಂತನನ್ನು ಹುಡುಕುವ ದಾರಿ ಸುಲಭ ಸಾಧ್ಯವಲ್ಲ. ಭಕ್ತಸ್ಥಲದಲ್ಲಿ ಬಸವಣ್ಣನವರು 'ಅಯ್ಯಾ ಬಡಪಶು ಕೆಸರಲ್ಲಿ ಬಿದ್ದು ಒದ್ದಾಡುವಂತೆ' ನನ್ನ ಪರಿಸ್ಥಿತಿಯಾಗಿದೆ ಎಂದು ವರ್ಣಿಸಿದಂತೆ ಕುವೆಂಪು ಕೂಡ ಸತ್ಯಾನ್ವೇಷಣೆಗಾಗಿ ಪರಿತಪಿಸುವ ಭಾವವೊಂದು ಈ ಕೆಳಗಿನ ವಚನದಲ್ಲಿದೆ–

ದಾರಿಯ ಪರಿಚಯವಿಲ್ಲ; ಸೇರುವ ಗುರಿಯ ಪರಿಚಯವಿಲ್ಲ.
ನಿನ್ನ ಪರಿಚಯವೊಂದೆ ನನಗೆಲ್ಲದರ ಪರಿಚಯ
ಕಡಿದಾದ ಬೆಟ್ಟಗಳಿರೆ ಕೈಹಿಡಿದು ಮೇಲೇರಿಸು
ಆಳವಾದ ಕಂದರಗಳಿರೆ ಮೆಲ್ಲಗೆ ಕೆಳಗಿಳಿಸು
ಮುಳ್ಳು ಕೆಸರುಗಳಿರೆ ಮೇಲೆತ್ತಿ ದಾಟಿಸು
ಮರಭೂಮಿಗಳಿರೆ ಹಾಡಿ ಹುರಿದುಂಬಿಸು[7]

ಇದು ವಚನದ ಪೂರ್ಣಪ್ರಮಾಣದ ಶೈಲಿಯನ್ನು ಅನುಕರಿಸಿದೆ. ಭಗವಂತನಿಗಾಗಿ ಭಕ್ತನು ತನ್ನ ಮುಗ್ಧತೆಯಿಂದ ಆರ್ತನಾಗಿ ಬೇಡಿಕೊಳ್ಳುವುದು ಸಾಮಾನ್ಯ. ಭಕ್ತನ ಮುಗ್ಧತೆಯೇ ಭಗವಂತನಿಗೆ ಆಪ್ಯಾಯಮಾನ. ಅವನು ಕೂಡ ಭಕ್ತನ ಈ ಪರಿಯ ತೊಳಲಾಟದ ಲೀಲೆಯನ್ನು ಕಂಡು ಆನಂದಿಸುತ್ತಾನೆ. ಕೊನೆಯಲ್ಲಿ ಭಕ್ತನಾದವನು ತನ್ನತನವನ್ನು ಕಳೆದುಕೊಂಡು, ಅಹಂನಿರಸನ ಪ್ರಜ್ಞೆಯಿಂದ ಭಗವಂತನಲ್ಲಿ ತನ್ನನ್ನು ಸಮರ್ಪಿಸಿಕೊಳ್ಳುತ್ತಾನೆ.

ನೀನೆನ್ನನಾಲಂಗಿಸಿ ಚುಂಬಿಸಲು ನಿನ್ನ ಚೆಂದುಟಿಯ ಸುಖ ಕೋಮಲ
ಮೃದುಮಧುರ ಸ್ಪರ್ಶನಕೆ ನನ್ನ ಅಹಂಕಾರ ಕರಗಿ ಲಯವಾಗುತ್ತದೆ.
ನಿನ್ನಾತ್ಮದಲಿ ತಲ್ಲೀನವಾಗಿ ಬಾಂದಳದ ಮುಗಿಲಮನೆಯಿಂದ್ವೈತಂದು
ತಿರಿವೆಣ್ಣಿನ ಸಿರಿಗೆನ್ನೆಗೆ ಮುತ್ತುಕೊಡುವ ಆಲಿಕಲ್ಲಿನಂತೆ[8]

ಪರಮಾತ್ಮನಲ್ಲಿ ಜೀವಾತ್ಮನು ಲೀನವಾಗಿ ಅಹಂಕಾರವನ್ನು ಕರಗಿಸುವ ಕುವೆಂಪು ಅವರ ಕಲ್ಪಕತೆಯ ಭಾವ ಇಲ್ಲಿ ಅನನ್ಯವಾಗಿ ಮೂಡಿಬಂದಿದೆ. "ಆತ್ಮ ಪರಮಾತ್ಮನನ್ನು

ನಿರೀಕ್ಷಿಸಿ, ಅವನನ್ನು ಸಾಕ್ಷಾತ್ಕರಿಸಿಕೊಂಡು, ತನ್ನ ಸಾರಸರ್ವಸ್ವಗಳನ್ನು ಅವನಲ್ಲಿ ಲೀನವಾಗಿಸಿ ತಾನೆಂಬುದು ಇಲ್ಲವಾಗುವ ಅದ್ಭುತ ಪವಾಡದ ಹೆಜ್ಜೆಗಳನ್ನು ಗುರುತಿಸುವ ಈ ವಚನ ಕವನಗಳಿಗೆ 'ಕಿಂಕಿಣಿ' ಎಂಬ ಹೆಸರೇ ಅತ್ಯಂತ ರಮಣೀಯವಾಗಿದೆ, ಧ್ವನಿಪೂರ್ಣವಾಗಿದೆ, ಅನ್ವರ್ಥವಾಗಿದೆ. ಆಧುನಿಕ ಕನ್ನಡ ಕಾವ್ಯದಲ್ಲಿ ಭಕ್ತ-ಭಗವಂತರ ಪ್ರೇಮ ಸಂಬಂಧವಾಗಲಿ, ಮಧುರಭಕ್ತಿಯಾಗಲಿ, ವಾತ್ಸಲ್ಯ ವಿರಹಗಳಾಗಲಿ ಇನ್ನೊಂದು ಕಡೆ ಈ ತೀವ್ರತೆಯಲ್ಲಿ ಈ ಗಾಂಭೀರ್ಯದಲ್ಲಿ ರೂಪುದೋರಿಲ್ಲ. ಹರಳುಗೊಂಡಿಲ್ಲ. ಈ ಭಾವಶ್ರೀಮಂತಿಕೆಯನ್ನು ಪ್ರಕಟಗೊಳಿಸಿಲ್ಲ"[9] ಎಂಬ ಹಾಮಾನಾ ಅವರ ಮಾತುಗಳು ಕುವೆಂಪು ಅವರ ಮೇಲಿನ ಅತಿಯಾದ ಭಕ್ತಿ ಗೌರವಗಳಿಂದ ಹೇಳಿದವುಗಳಾಗಿವೆ. ಈ ಮಾತುಗಳಲ್ಲಿ ತುಂಬ ಉತ್ಪ್ರೇಕ್ಷೆ ತುಂಬಿದೆ. ಯಾಕೆಂದರೆ ಕುವೆಂಪು ಈ ಸಂಕಲನ ಪ್ರಕಟಿಸುವ 13 ವರ್ಷಗಳ ಪೂರ್ವದಲ್ಲಿಯೇ ಮಧುರಚೆನ್ನರು 'ನನ್ನನಲ್ಲ' ಎಂಬ ಸಂಕಲನವನ್ನು ಪ್ರಕಟಿಸಿದ್ದಾರೆ(1933). ನನ್ನನಲ್ಲ ಸಂಕಲನದ ಮುಂದೇ ಕುವೆಂಪು ಅವರ ಕಿಂಕಿಣಿ ಕಿರಿದಾಗಿ ಕಾಣುತ್ತದೆ. 12ನೇ ಶತಮಾನದ ಬಸವಾದಿ ಶಿವಶರಣರ ಅನುಭಾವ-ಮಧುರಭಕ್ತಿಗಳನ್ನು ಅತ್ಯಂತ ರಸವತ್ತಾಗಿ ಚಿತ್ರಿಸಿದ ಒಂದು ಅಮೋಘ ಕಾವ್ಯ ನನ್ನನಲ್ಲ.

ವಿ.ಕೃ.ಗೋಕಾಕರು "ಮಧುರಚೆನ್ನರ ನನ್ನನಲ್ಲವೆಂಬ ನೀಳ್ಗವನವು ವಿಶ್ವದ ಯಾವುದೇ ಉಜ್ವಲವಾದ ಅನುಭಾವಗೀತದೊಡನೆ ಸರಿತೂಗಿ ನಿಲ್ಲಬಲ್ಲುದು. ಅನುಭಾವಗೀತದ ಹೊಸಪರಿಯನ್ನೊಂದು ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಕನ್ನಡಿಗರು ಹೆಮ್ಮೆ ಪಡುವಂತಹ ಕೃತಿಯಿದು"[10] ಎಂದು ಮನದುಂಬಿ ಬಣ್ಣಿಸಿದ್ದಾರೆ.

"ಅನುಭಾವ ಪರಂಪರೆಯಲ್ಲಿ ಬೆಳೆದು ಪುಷ್ಟವಾದ ಕನ್ನಡ ಕಾವ್ಯಕ್ಕೆ ಮಧುರಚೆನ್ನರ ನನ್ನನಲ್ಲವು ಒಂದು ಅಪ್ರತಿಮ ಕಾಣಿಕೆಯಾಗಿ ದೊರೆತಿದೆ."[11] ಎಂದು ರಂ.ಶ್ರೀ.ಮುಗಳಿ ಅಭಿಪ್ರಾಯಪಟ್ಟಿದ್ದಾರೆ.

ನನ್ನನಲ್ಲ ಕಾವ್ಯಸಂಕಲನ ಪ್ರಕಟಿಸುವ ಹೊತ್ತಿಗೆ ಮಧುರಚೆನ್ನರು ಸಂಪೂರ್ಣವಾಗಿ ಅರವಿಂದರ ಭಕ್ತರಾಗಿದ್ದರು. ಕನ್ನಡ ಸಾಹಿತ್ಯ ನಿರ್ಮಿತಿಯಲ್ಲಿ ಅರವಿಂದರ ಪ್ರಭಾವವು ದಟ್ಟವಾಗಿರುವುದನ್ನು ಈಗಾಗಲೇ ವಿದ್ವಾಂಸರು ಗುರುತಿಸಿದ್ದಾರೆ. ನನ್ನನಲ್ಲದಲ್ಲಿ ಅರವಿಂದರ ಪ್ರಭಾವಕ್ಕಿಂತ ವಚನಗಳ ಪ್ರಭಾವವೇ ಅಧಿಕವಾಗಿದೆ. ನನ್ನನಲ್ಲ, ಮಧುರಗೀತದ ಪ್ರಾರಂಭದಲ್ಲಿ ಮಧುರಚೆನ್ನರು ಶರಣರ ವಚನಗಳನ್ನು ಉಲ್ಲೇಖಿಸಿ ತಮ್ಮ ಕಾವ್ಯವನ್ನು ಆರಂಭ ಮಾಡುತ್ತಾರೆ. ಎಲ್ಲಕ್ಕೂ ಮಿಗಿಲಾಗಿ ಅಕ್ಕಮಹಾದೇವಿ ಚೆನ್ನಮಲ್ಲಿಕಾರ್ಜುನನ್ನು ಅನ್ವೇಷಣೆ ಮಾಡುತ್ತ, 'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ, ನೀವು ಕಾಣಿರೆ' ಎಂದು ಪ್ರಕೃತಿಯಲ್ಲಿರುವ ಎಲ್ಲ ವನ್ಯಜೀವಿಗಳನ್ನು ಕೇಳುತ್ತ ಹೋದಂತೆ, ಮಧುರ ಚೆನ್ನರು ಕೂಡ ಪ್ರಕೃತಿಯಲ್ಲಿರುವ ಪ್ರಾಣಿ-ಪಕ್ಷಿಗಳನ್ನು ಕೇಳುತ್ತ ಹೋಗುವ ಪರಿ ವಚನಗಳಿಂದಲೇ ರೂಪುಗೊಂಡಿದ್ದು ಎಂಬುದನ್ನು ಗಮನಿಸಬಹುದು.

ನಿಲ್ಲು ನಿಲ್ಲೆಲೆ ನವಿಲೆ ನಿನ್ನ ಕಣ್ಣುಗಳೇಸು
ಕಣ್ಣ ಬಣ್ಣಗಳೇಸು ಎಣಿಸಲಾರೆ
ಎಲ್ಲ ರೂಪಿಸಿದವನು ಎಲ್ಲಿ ತಾನಡಗಿದನೆ
ತಾಳಲಾರದು ಜೀವ ಹೇಳಬಾರೆ.
ಪಿಳುಕಿಸದ ಸಿರಿಗಣ್ಣು ಸುತ್ತು ಚಿನ್ನದ ರೇಖೆ
ಬೆಳ್ಳಿ ಮಿರುಗಿನ ಮೈಯ ಕಾಂತಿ ನಿನಗೆ

ತಿಳಿಗಂಗೆ ನಿಮ್ಮವ್ವ ಮೀನಮೂರುತಿ ತಿಳಿಸೊ
ನನ್ನೊಡೆಯನಡಗಿರುವನಾವ ಕಡೆಗೆ[12]

ಹೀಗೆ ನವಿಲು, ಮೀನು, ಹೊನ್ನಿ, ಕೋಗಿಲೆ, ಗಿಳಿ, ಟೀಂವಕ್ಕಿ ಮೊದಲಾದ ಪಕ್ಷಿಗಳನ್ನು ಮಾತನಾಡಿಸುತ್ತ ಹೋಗುತ್ತಾರೆ. "ಮಧುರ ಚೆನ್ನರ ಕಾವ್ಯ ಕಲ್ಪನೆಗೆ ಮಹಾದೇವಿಯಕ್ಕನ ಆ ವಚನಗಳು ಪ್ರೇರಣೆಯಿತ್ತಿರುವುದನ್ನು ಅಲ್ಲಗಳೆಯುವಂತಿಲ್ಲ. ಯಾಕೆಂದರೆ ಅವರ ಕಾವ್ಯದಲ್ಲಿ ಅಲ್ಲಲ್ಲಿ ವಚನಕಾರರ ಪ್ರಭಾವವಿರುವುದು ಕಂಡುಬರುತ್ತದೆ. ವಚನಶಾಸ್ತ್ರದ ಗಾಢವ್ಯಾಸಂಗವುಳ್ಳ, ಕಲ್ಯಾಣದ ಶರಣರಲ್ಲಿ ಅಪಾರ ಭಕ್ತಿಯುಳ್ಳ ಅವರಲ್ಲಿ ಅದು ಸ್ವಾಭಾವಿಕವಾದದ್ದು ಎನಿಸುತ್ತದೆ."[13] ಎಂಬ ಡಾ. ಗುರುಲಿಂಗ ಕಾಪಸೆ ಅವರ ಮಾತುಗಳು ಇಲ್ಲಿ ಸ್ಮರಣೀಯ.

ನವೋದಯ ಕಾವ್ಯದ ಇನ್ನೊಬ್ಬ ಪ್ರಮುಖ ಕವಿ ದ.ರಾ.ಬೇಂದ್ರೆ. ಕನ್ನಡ ಕಾವ್ಯಪರಂಪರೆಯ ಎಲ್ಲ ರೂಪಗಳು ಬೇಂದ್ರೆಯವರನ್ನು ಪ್ರಭಾವಿಸಿವೆ. 1923ರಲ್ಲಿಯೇ ಅವರು ವಿಜಯಪುರ ಸಾಹಿತ್ಯ ಸಮ್ಮೇಳನದಲ್ಲಿ 'ನಮಗೆ ಬೇಕಾದ ಕಾವ್ಯ' ಎಂಬ ವಿಷಯ ಕುರಿತು ಮಾತನಾಡುತ್ತ–

"ನಮಗೆ ಈಗ ಬೇಕಾದವರು ಅಷ್ಟಾದಶವರ್ಣನದ, ಚಕೋರ–ಚಾತಕಗಳ ಸಮಯದ ಕವಿಗಳಲ್ಲ; ಸೃಷ್ಟಿಯ ಪೂಜಾರಿಗಳಾದ ವಿಚಾರ ಮೂಢ ವಿಕಾರಗಳನ್ನು ತಾಲಲಯಕ್ಕೆ ಹಾಡುವ ಕವಿಗಳಲ್ಲ. ನಮಗೆ ಬೇಕಾದವರು ಋಷಿಗಳು....ವೇದದ ಕವಿಗಳು. ಕನ್ನಡ ಸಾಹಿತ್ಯದಲ್ಲಿ ವಚನಕಾರರೂ ದಾಸಕೂಟದವರೂ ಪ್ರಾರಂಭದ ಪ್ರಯತ್ನವನ್ನು ಮಾಡಿರುವರು. ಅವರ ಹಾದಿಯನ್ನೇ ನಾವು ಹಿಡಿಯಬೇಕು"[14]

ವಚನಕಾರರು ಅದರಲ್ಲೂ ಅಲ್ಲಮಪ್ರಭು ಬೇಂದ್ರೆಯವರ ಮೇಲೆ ಮಾಡಿದ ಪ್ರಭಾವ ಅದ್ಭುತವಾದುದು. ಅಲ್ಲಮನ–

ನಾನೆಂಬುದು ಪ್ರಮಾಣ, ನೀನೆಂಬುದು ಪ್ರಮಾಣ
ಸ್ವಯಂ ಎಂಬುದು ಪ್ರಮಾಣ, ಪರವೆಂಬುದು ಪ್ರಮಾಣ
ಪ್ರಮಾಣವೆಂಬುದು ಪ್ರಮಾಣ
ಗುಹೇಶ್ವರನೆಂಬುದು ಅಪ್ರಮಾಣ

ಅಲ್ಲಮನ ಈ ವಚನಕ್ಕೆ ದ.ರಾ.ಬೇಂದ್ರೆಯವರು 'ಸಂತ ಮಹಾಂತಾಂಚಾ ಪೂರ್ಣ ಶಂಭು ವಿಠ್ಠಲ' ಎಂಬ ಮರಾಠಿ ಕೃತಿಯಲ್ಲಿ ಈ ರೀತಿ ವ್ಯಾಖ್ಯಾನ ಮಾಡಿದ್ದಾರೆ–

"ಅನುಭವೀ ಸಂವಾದದಲ್ಲಿ ನನಗೆ ನೀನು ಪ್ರಮಾಣ. ನಾನು ನಿನಗೆ ಪ್ರಮಾಣವಾಗದಿದ್ದರೆ ಸಂವಾದ ಹೇಗೆ ಸಾಧ್ಯ? ಹಾಗೆಯೆ, ಸ್ವಯಂ ಮತ್ತು ಪರಂಗಳ ಸಾಮಂಜಸ್ಯ ಅನುಭವ ವೇದ್ಯವಾಗದಿದ್ದರೆ, ಪ್ರಮಾಣವೇ ನಿಂತು ಹೋಗುತ್ತದೆ. ಸ್ವಯಂ ಪ್ರಮಾಣದ ಅಧಿಷ್ಠಾನವಿಲ್ಲದೆ ಅನುಭಾವ ಮಾರ್ಗದಲ್ಲಿ ಕಾಲಿಡುವುದಾದರೂ ಹೇಗೆ? ಇಂಥ ಪ್ರಶ್ನೆಗಳನ್ನು ಕೇಳಿ ಅಲ್ಲಮ ದಿಕ್ಕು ತೋರಿದ್ದಾನೆ." ಅಲ್ಲಮನ ಈ ವಚನ ಬೇಂದ್ರೆಯವರನ್ನು ಗಾಢವಾಗಿ ಕಾಡಿದೆ. ಹೀಗಾಗಿ ಅಲ್ಲಮನ ವಚನದ ಛಾಯೆಯ ಮೇಲೆ ಅವರು 'ನಾಕು ತಂತಿ' ಎಂಬ ಸುಪ್ರಸಿದ್ಧ ಕವನವೊಂದನ್ನು ಹೊಸೆದರು. ಈ ವಿಷಯವಾಗಿ ಖ್ಯಾತ ವಿಮರ್ಶಕರಾದ ಜಿ. ಎಸ್. ಆಮೂರ ಅವರು ಹೀಗೆ ಹೇಳುತ್ತಾರೆ–

"ಅಲ್ಲಮನ ವಚನದಲ್ಲಿ ನಾನು, ನೀನು, ಸ್ವಯಂ, ಪರಂ ಚತುರ್ಮುಖದರ್ಶನ ಬೇಂದ್ರೆಯವರ ಅನೇಕ ಕವನಗಳಲ್ಲಿ ಅಭಿವ್ಯಕ್ತಿ ಪಡೆದು ನಾಕು ತಂತಿಯಲ್ಲಿ ನಿರ್ಣಾಯಕ ಸ್ವರೂಪವನ್ನು ಹೊಂದಿದೆ.

ನಾನು ನೀನು
ಆನು ತಾನು
ನಾಕೇ ನಾಕು ತಂತಿ

ಆತ್ಮಾ ಚತುಷ್ಪಾತ್ ಎಂಬ ಮಾತು ಉಪನಿಷತ್ತುಗಳಲ್ಲಿದೆ. ಆದರೆ ಬೇಂದೆಯವರ ಸಾಲುಗಳ ನಿಜವಾದ ಮೂಲ ಅಲ್ಲಮನ ವಚನದಲ್ಲಿದೆ ಎಂದೆನಿಸುತ್ತದೆ. ಇಲ್ಲಿ ನಾನು, ನೀನು ಹಾಗೆಯೆ ಉಳಿದು ಸ್ವಯಂ ಎನ್ನುವುದು ಆನು ಆಗಿ, ಪರಂ ತಾನು ಆಗಿ ಪರಿವರ್ತಿತವಾಗಿವೆ. ಕನ್ನಡದ ಶಕ್ತಿಯಲ್ಲಿ ಬೇಂದ್ರೆಯವರಿಗೆ ಅಪಾರ ಶ್ರದ್ಧೆಯಿತ್ತು. 'ಮನದೆಲ್ಲ ದಾಹವನ್ನು ಶಮನಗೊಳಿಸುವ ರಸಝುರಿಯು ಕನ್ನಡದ ಕೆಚ್ಚಿನಲ್ಲಿದೆ. ಚಿತ್ತದ ಎಲ್ಲ ಪೊರೆಗಳನ್ನು ಬಿಚ್ಚಿ ತೋರಿಸುವ ಕಸುವು ಕನ್ನಡ ನುಡಿಗಿದೆ' (ಸಾಹಿತ್ಯ ಸಂಶೋಧನ–ಲೇಖಕನ ನುಡಿ) ಎಂದು ಅವರು ಹೇಳಿದ್ದಾರೆ. ಈ ಶ್ರದ್ಧೆಯನ್ನು ಅವರು ವಚನಕಾರರ ಮೂಲಕವಾಗಿ ಅದರಲ್ಲಿಯೂ ಮುಖ್ಯವಾಗಿ ಅಲ್ಲಮಪ್ರಭುವಿನ ಮೂಲಕವಾಗಿ ಪಡೆದುಕೊಂಡರು ಎಂದು ನಿಸ್ಸಂಶಯವಾಗಿ ಹೇಳಬಹುದು"[15]

ಖ್ಯಾತ ವಿಮರ್ಶಕ ಡಾ. ಗಿರಡ್ಡಿ ಗೋವಿಂದರಾಜು ಅವರು ಈ ಕವನಕ್ಕೂ ಅಲ್ಲಮನ ವಚನಕ್ಕೂ ಇರುವ ಸ್ವಾಮ್ಯ ಆಶ್ಚರ್ಯಕರವಾಗಿದೆ ಎಂದು ಹೇಳುತ್ತ– "ಇಬ್ಬರಿಗೂ ಶ್ರುತಿವಾಕ್ಯವೇ ಆಧಾರವಾಗಿದ್ದರೂ, ಅವರ ನಡುವಿನ ಸಂಬಂಧ ಕೂಡ ಮಹತ್ವದ್ದಾಗಿದೆ. ತಮ್ಮ ದೀರ್ಘಕಾಲದ ಮಥನದ ನಂತರ ಬೇಂದ್ರೆಯವರು ಕಂಡುಕೊಂಡ ಈ ದರ್ಶನ ಅಲ್ಲಮನ ವಿಶಾಲ ದರ್ಶನದಲ್ಲಿ ಒಂದು ಸೆಳಕಾಗಿ ಹಾಯ್ದುಹೋಗಿದೆ" ಎಂಬ ಅಭಿಪ್ರಾಯಕ್ಕೆ ಬರುತ್ತಾರೆ.[16]

ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದುದು 'ನಾಕು ತಂತಿ' ಕವನ ಸಂಕಲನಕ್ಕೆ. ಈ ಸಂಕಲನದಲ್ಲಿರುವ ನಾಲ್ಕುತಂತಿ ಎಂಬ ಕವನ ಮೂಡಲು ಅಲ್ಲಮನ ವಚನವೇ ನೇರವಾಗಿ ಪ್ರಭಾವವಾಗಿದೆ ಎಂಬ ಜಿ.ಎಸ್ ಆಮೂರ ಮತ್ತು ಡಾ. ಗಿರಡ್ಡಿ ಗೋವಿಂದರಾಜು ಅವರ ಅಭಿಪ್ರಾಯ ಯಥಾಯೋಗ್ಯವಾಗಿದೆ. ಅಲ್ಲಮನ ನಿಗೂಢ ಅಧ್ಯಾತ್ಮ ಭಾಷೆಯನ್ನು ಬೇಂದ್ರೆ ಸರಿಯಾಗಿ ಅರ್ಥಮಾಡಿಕೊಂಡಿದ್ದರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ವಚನಕಾರರ ಬದುಕೇ ಕವಿಗಳಿಗೆ ಆದರ್ಶಪಥವಾಯಿತು ಎಂಬುದನ್ನು ಸ್ವತಃ ಬೇಂದ್ರೆಯವರೇ ಹೀಗೆ ಹೇಳಿದ್ದಾರೆ–

"ಸಾಹಿತ್ಯ ಕವಿಯ ಸೃಷ್ಟಿ ಶಬ್ದದ ಮಾಯೆ...ವಚನಗಳ ಮಾತು ಹಾಗಲ್ಲ. ಬಸವನ ವಚನಗಳೇ ಆಗಲಿ, ಮಹಾದೇವಿಯ ವಚನಗಳೇ ಆಗಲಿ, ಪ್ರಭುವಿನ ವಚನಗಳೇ ಆಗಲಿ ಅವುಗಳಲ್ಲಿ ಮಹತ್ತರವಾದ ಪ್ರಾಣಶಕ್ತಿಯು ಸ್ಪಂದಿಸುವುದು. ಅವರ ಜೀವನವೇ ಬೇರೆ ಕವಿಗಳಿಗೆ ಕಾವ್ಯ ವಸ್ತುವಾಯಿತು."[17]

ಬೇಂದ್ರೆಯವರ 'ಉಯ್ಯಾಲೆ' ಎಂಬ ಕವನ ಸಂಕಲನದಲ್ಲಿ 25 'ಕರುಳಿನ ವಚನಗಳು' ಪ್ರಕಟವಾಗಿವೆ. ಶರಣರ ವಚನಗಳ ಲಯವನ್ನು ಬೇಂದ್ರೆಯವರು ಪೂರ್ಣಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. ಈ ವಚನಗಳ ರಚನೆ ಕುರಿತು ಸ್ವತಃ ಬೇಂದ್ರೆಯವರು ಹೇಳುವ ಮಾತುಗಳು ಹೀಗಿವೆ: "ಫ್ರೀ ವ್ಹರ್ಸಿಗೆ ಸರಿಯಾಗುವ ಸ್ವಚ್ಛಂದ ಗೀತ ಪ್ರಕಾರವನ್ನು ಹುಟ್ಟಿಸಿಕೊಳ್ಳಲು ನಾನು 1920–21ರಲ್ಲಿ ಯೋಚಿಸಿ 'ನೋವಿನ ಬೆಲೆ ಹಿಗ್ಗಿನ ನೆಲೆ' ಮೊದಲಾದ ವಚನಗಳನ್ನು ಬರೆದೆ. ಪ್ರಾಚೀನರ ವಚನಗಳು ಶುದ್ಧ ಪಾರಮಾರ್ಥಿಕ ಸಾಧನೆಯ ಮಾರ್ಗದೊಳಗಿನವು. ಕರುಳಿನ ವಚನಗಳೊ ಲೌಕಿಕ ಭಾವದ ಪ್ರಕಟನೆಗೆ ಬಳಸಿಕೊಂಡಂಥವುಗಳಾಗಿವೆ."[18] ಬೇಂದ್ರೆಯವರು ಈ ಕರುಳಿನ ವಚನಗಳು

ಶರಣರ ವಚನಗಳ ಶಿಲ್ಪ ಮತ್ತು ವೈಶಿಷ್ಟ್ಯಗಳನ್ನು ಹೋಲುತ್ತವೆ. "ವಚನಗಳಲ್ಲಿ ಭಕ್ತಿ ಸ್ಥಾಯಿಯಾಗಿದ್ದರೆ, ಇವುಗಳಲ್ಲಿ ವಾತ್ಸಲ್ಯವಿದೆ; ಅಲ್ಲಿ ಭಕ್ತಿ ಮಾತಾಡುತ್ತಿದ್ದರೆ; ಇಲ್ಲಿ ತಾಯಿ ಮಾತಾಡುತ್ತಿದ್ದಾಳೆ; ಅಲ್ಲಿ ಸ್ವಾನುಭವದ ಅಭಿವ್ಯಕ್ತಿಯಿದ್ದರೆ, ಇಲ್ಲಿ ಸಹಾನುಭೂತಿಯ ಅಭಿವ್ಯಕ್ತಿ ಇದೆ; ಅಲ್ಲಿ ಆಗಮಿಕ ದೃಷ್ಟಿ ಮುಖ್ಯವಾಗಿದ್ದರೆ, ಇಲ್ಲಿ ಲೌಕಿಕ ಭಾವ ಮುಖ್ಯವಾಗಿದೆ."[19] ಎಂದು ಖ್ಯಾತವಿಮರ್ಶಕರಾದ ಡಾ. ಗಿರಡ್ಡಿ ಗೋವಿಂದರಾಜ ಅವರ ಅಭಿಪ್ರಾಯ ಇಲ್ಲಿ ಅರ್ಥಪೂರ್ಣವಾಗಿದೆ. ಶರಣರ ವಚನಗಳಲ್ಲಿ ಆಗಮಿಕ ದೃಷ್ಟಿಯಿದೆ ಎಂಬ ಮಾತನ್ನು ಪುನರ್ ಪರಿಶೀಲನೆಗೆ ಒಳಪಡಿಸಬೇಕಾಗಿದೆ. ಯಾಕೆಂದರೆ ಅಲ್ಲಮ, ಸಿದ್ಧರಾಮ, ಉರಿಲಿಂಗಪೆದ್ದಿ ಮೊದಲಾದ ಕೆಲವು ವಚನಕಾರರಲ್ಲಿ ಮಾತ್ರ ಅಧ್ಯಾತ್ಮದ ಪರಿಭಾಷೆಗಳು ಹೆಚ್ಚಾಗಿ ಬರುತ್ತವೆ. ಬಸವಣ್ಣ ಆದಿಯಾಗಿ ಎಲ್ಲ ಕೆಳವರ್ಗದ ವಚನಕಾರರ ದೃಷ್ಟಿಕೋನ ಸಾಮಾಜಿಕ ನಿಲುವಿನಿಂದ ಕೂಡಿತ್ತು, ಅಂದರೆ ಗಿರಡ್ಡಿ ಅವರು ಭಾವಿಸಿದಂತೆ ಅವು ಕೂಡ ಲೌಕಿಕ ನೆಲೆಯಲ್ಲಿಯೇ ರೂಪುಗೊಂಡಿದ್ದವು.

ಬೇಂದ್ರೆಯವರ ಕರುಳಿನ ವಚನಗಳು ಮತ್ತು ಕುವೆಂಪು ಅವರ ಕಿಂಕಿಣಿ ಎರಡೂ ಕಾವ್ಯಪ್ರಕಾರಗಳನ್ನು ವಚನಕಾವ್ಯವೆಂದು ವಿದ್ವಾಂಸರು ಗುರುತಿಸಿದ್ದು ಔಚಿತ್ಯಪೂರ್ಣವಾಗಿದೆ.

ಬೇಂದ್ರೆಯವರ ಅಲ್ಲಮಪ್ರಭು ಬಸವಣ್ಣ ಸಿದ್ಧರಾಮ ಮೊದಲಾದ ಶರಣರನ್ನು ಕುರಿತು ಅದ್ಭುತವೆನ್ನಿಸುವ ಸುನಿತಗಳನ್ನು ರಚಿಸಿದ್ದಾರೆ. ಅವರ ಸುಪ್ರಸಿದ್ಧ ಕವನ 'ಜೋಗಿ' ಕವನ ಅಲ್ಲಮನ 'ಎತ್ತಣ ಮಾಮರ ಎತ್ತಣ ಕೋಗಿಲೆ' ವಚನದ ಛಾಯೆಯನ್ನು ಹೊಂದಿದ್ದರೆ, 'ಇನ್ನೂ ಯಾಕ ಬರಲಿಲ್ಲವ್ವ' ಮತ್ತು 'ಮಲ್ಲಾಡದ ಗಿಣಿ' ಮೊದಲಾದ ಕವನಗಳಲ್ಲಿ ಮಹಾದೇವಿಯಕ್ಕನ ಆಧ್ಯಾತ್ಮಿಕ ಶೃಂಗಾರದ ವಚನಗಳ ಭಾವರಸವನ್ನು ವ್ಯಕ್ತಪಡಿಸುತ್ತವೆ.

ಉತ್ತರ ಕರ್ನಾಟಕದ ಬಹುತೇಕ ನವೋದಯ ಕಾಲ ಘಟ್ಟದ ಕವಿಗಳು ಶರಣರ ವಚನಗಳಿಂದ ಪ್ರಭಾವಿತರಾಗಿದ್ದರು ಎಂಬುದನ್ನು ಡಾ. ಗಿರಡ್ಡಿ ಗೋವಿಂದರಾಜು ಅವರು ಹೀಗೆ ವಿಶ್ಲೇಷಿಸುತ್ತಾರೆ–"ಉತ್ತರ ಕರ್ನಾಟಕದ ನವೋದಯ ಕಾವ್ಯಕ್ಕೆ ಮತ್ತೊಂದು ಮುಖ್ಯಪ್ರೇರಣೆ ಬಂದದ್ದು ವಚನಸಾಹಿತ್ಯದಿಂದ. ವಚನಗಳ ಸಂಗ್ರಹ, ಸಂಪಾದನೆ, ಪ್ರಕಟಣೆಗಳ ಕೆಲಸ ಮೊದಲು ಆರಂಭವಾದದ್ದು ಇದೇ ಭಾಗದಲ್ಲಿ. ಆಧುನಿಕ ಅನುಭವಗಳ ಅಭಿವ್ಯಕ್ತಿಗಾಗಿ ತಕ್ಕ ಕಾವ್ಯಮಾಧ್ಯಮ ಮತ್ತು ಭಾಷೆಗಳನ್ನು ಹುಡುಕುತ್ತಿದ್ದ ಇಲ್ಲಿಯ ಕವಿಗಳಿಗೆ ವಚನಕಾವ್ಯ ಅನೇಕ ರೀತಿಯಲ್ಲಿ ನೆರವಿಗೆ ಬಂತು. ವಚನಗಳ ಭಾಷೆ ಮತ್ತು ಲಯ ಈ ಶತಮಾನದ ಆಡುನುಡಿಗೆ ಬಹಳ ಹತ್ತಿರವಾಗಿತ್ತು. ಸಾಮಾಜಿಕ ಆಧ್ಯಾತ್ಮಿಕ ಅನುಭವಗಳನ್ನು ಸಮರ್ಥವಾಗಿ ಅಭಿವ್ಯಕ್ತಿಸುವಷ್ಟು ಅದರ ಶಿಲ್ಪ ಸಂಕೀರ್ಣವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ, ಅನುಭವವನ್ನು ಆತ್ಮನಿಷ್ಠ ನೆಲೆಯಲ್ಲಿ ಪರಿಭಾವಿಸಲು ನವೋದಯದ ರೋಮ್ಯಾಂಟಿಕ್ ಕಾವ್ಯಕ್ಕೆ ಅಗತ್ಯವಾಗಿದ್ದ ತಂತ್ರಸೂಕ್ಷ್ಮಗಳನ್ನು ಒಳಗೊಂಡಿತ್ತು. ಈ ಎಲ್ಲ ದೃಷ್ಟಿಯಿಂದಲೂ ಉತ್ತರ ಕರ್ನಾಟಕದ ಕವಿಗಳು ವಚನಗಳಿಂದ ಆಕರ್ಷಿತರಾದರು. ಬೇಂದ್ರೆ, ಮಧುರಚೆನ್ನ, ಕರ್ಕಿ, ಕಣವಿಯವರ ಕಾವ್ಯದಲ್ಲಿ ವಚನಗಳ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಬೇಂದ್ರೆಯವರಂತೂ ಕರುಳಿನ ವಚನಗಳನ್ನೇ ಬರೆದರು. ಮುಂದೆ ನವ್ಯಕಾವ್ಯದ ಸಂದರ್ಭದಲ್ಲಿ ಮುಕ್ತಛಂದವನ್ನು ರೂಪಿಸಿಕೊಳ್ಳಬೇಕಾಗಿ ಬಂದಾಗ ವಿನಾಯಕರು ತಮ್ಮ ಸಮುದ್ರಗೀತಗಳಲ್ಲಿ ವಚನದ ಲಯವನ್ನೇ ಆಧಾರವಾಗಿ ಇರಿಸಿಕೊಂಡರು. ಮೇಲಾಗಿ, ಅನುಭಾವ, ಅಧ್ಯಾತ್ಮಗಳ ಕಡೆಗೆ ಒಲಿದ ಇಲ್ಲಿಯ ಕವಿಗಳು ವಚನಕಾರರ ಅನುಭಾವಸಂಪ್ರದಾಯದಿಂದಲೂ ಕಲಿಯುವದು ಸಾಕಷ್ಟು ಇತ್ತು. ಈ ವಿಷಯದಲ್ಲಿಯೂ ಉತ್ತರ ಕರ್ನಾಟಕದ ಕಾವ್ಯ ಉಳಿದ ಕಡೆಯ ಕಾವ್ಯಕ್ಕಿಂತ ಭಿನ್ನವಾಗಿದೆ."[20]

ಈ ಮಾತುಗಳ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಆನಂದಕಂದ, ಚೆನ್ನವೀರ ಕಣವಿ, ಡಿ.ಎಸ್. ಕರ್ಕಿ, ಎಸ್.ಡಿ. ಇಂಚಲ, ಸಿದ್ಧಣ್ಣ ಮಸಳಿ, ಮೊದಲಾದವರ ಕಾವ್ಯವನ್ನು ಗಮನಿಸಬಹುದು. ಕವಿಭೂಷಣ ಬೆಟಗೇರಿ ಕೃಷ್ಣಶರ್ಮರು ನವೋದಯಕಾವ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು. ಅವರು ಕೂಡ ವಚನಗಳ ಪ್ರಭಾವಕ್ಕೆ ಸಂಪೂರ್ಣವಾಗಿ ಒಳಗಾದವರು. 'ಸಾಮಾಜಿಕ ಸಂವಚನಗಳು' ಎಂಬ ಸಂಕಲನವನ್ನೇ ಅವರು ಪ್ರಕಟಿಸಿ ಆಧುನಿಕ ವಚನಸಾಹಿತ್ಯಕ್ಕೆ ಅಪೂರ್ವ ಕಾಣಿಕೆ ಸಲ್ಲಿಸಿದ್ದಾರೆ. 1938ರಿಂದ 1960ರವರೆಗೆ ಬೆಟಗೇರಿಯವರು 'ಜಯಂತಿ' ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದರು. ಈ ಕಾಲಘಟ್ಟದಲ್ಲಿ ವಚನಪ್ರಕಾರದ ಕಾವ್ಯವನ್ನು ಆಗಾಗ ಪ್ರಕಟಿಸುತ್ತ ಬಂದರು. 'ಸಾಮಾಜಿಕ' ಮತ್ತು 'ಕಾಲರಾಯ' ಎಂಬ ಅಂಕಿತ ಇಟ್ಟುಕೊಂಡು ಅವರು ವಚನಗಳನ್ನು ರಚಿಸಿದ್ದಾರೆ. ಹೊಸಗನ್ನಡದ ಒಂದು ಅಭಿವ್ಯಕ್ತಿಯ ಕ್ರಮವಾಗಿ ಸಮಕಾಲೀನ ಅನುಭವ, ಸಂವೇದನ ಹಾಗು ಚಿಂತನ ಲಹರಿಗಳಿಗೆ ಒಡ್ಡಿಕೊಂಡ ಬೇಟಗೇರಿಯವರ ವಚನಗಳಿಗೆ ಐತಿಹಾಸಿಕ ಮಹತ್ವವಿದೆ.

ಅತ್ತ ದಕ್ಷಿಣದಲ್ಲಿ–ನವೋದಯ ಕಾಲಘಟ್ಟದ ಪ್ರಮುಖ ಕವಿಗಳಾದ ಎಸ್. ವಿ. ರಂಗಣ್ಣನವರು 'ಮಾವಿನಕೆರೆ ರಂಗಯ್ಯ' ಎಂಬ ಅಂಕಿತದಲ್ಲಿ 1212 ವಚನಗಳ ಬೃಹತ್ ಸಂಪುಟ 'ರಂಗಬಿನ್ನಪ' ಎಂಬ ವಚನಸಂಕಲನವನ್ನು ರಚಿಸಿದರು. "ವಚನಗಳ ಅಪೂರ್ವ ರೀತಿಯನ್ನು ವಿನೂತನ ಸೊಬಗನ್ನು ಬಗೆದು ಆನಂದ ಪರವಶನಾದೆ, ಮುಗ್ಧನಾದೆ. ಸುಲಭ ಸರಳ ಶಬ್ದಗಳ ಇಂಪು ಸೊಂಪು, ಶಬ್ದಗುಚ್ಛಗಳ ಹೊಂದಾಣಿಕೆ ಅನ್ಯೋನ್ಯ, ವಾಕ್ಯಗಳ ಓಟ ಬೀಸು–ನನ್ನ ಚಿತ್ತವನ್ನು ಸೂರೆಗೊಂಡವು. ಪುನರುಕ್ತವಾಗುವ ಅಂಕಿತ, ಅಯ್ಯ ಎಂಬ ಸಂಬೋಧನೆ, ಪ್ರಾಸ ಅನುಪ್ರಾಸಗಳ ಕುಣಿತ, ಪ್ರಶ್ನೆಗಳ ಸುರಿಮಳೆ, ಉಪಮಾನಗಳ ಜಲಪಾತ ಒಟ್ಟಾಗಿ ನನ್ನನ್ನು ವಚನ ದಾಸನನ್ನಾಗಿ ಮಾಡಿದವು"[21]

ಎಸ್.ವಿ.ರಂಗಣ್ಣನವರಂತೆ ವಚನಗಳಿಗೆ ಮನಸೋತ ಮತ್ತೊಬ್ಬ ಧೀಮಂತ ವಿದ್ವಾಂಸ ಎಸ್.ವಿ. ಪರಮೇಶ್ವರಭಟ್ಟರು. ಕಾಳಿದಾಸ, ಭಾಸ ಮೊದಲಾದ ಪ್ರಾಚೀನ ಕವಿಗಳ ಸಂಸ್ಕೃತ ಕಾವ್ಯಗಳನ್ನು ಕನ್ನಡಕ್ಕೆ ಅನುವಾದಿಸಿ ಅಭಿನವ ಕಾಳಿದಾಸರೆಂದೇ ಖ್ಯಾತರಾದ ಪರಮೇಶ್ವರಭಟ್ಟರು 'ಸದಾಶಿವ ಗುರು' ಎಂಬ ಅಂಕಿತದಲ್ಲಿ ಏಳು ನೂರು ವಚನಗಳನ್ನು 'ಉಪ್ಪು ಕಡಲು' ಎಂಬ ಸಂಕಲನದಲ್ಲಿ ಪ್ರಕಟಿಸಿದ್ದಾರೆ.

ವಿಶೇಷವೆಂದರೆ ಎಸ್.ವಿ.ರಂಗಣ್ಣನವರ ರಂಗಬಿನ್ನಪ ಮತ್ತು ಎಸ್.ವಿ. ಪರಮೇಶ್ವರಭಟ್ಟರ ಉಪ್ಪು ಕಡಲು ಈ ವಚನ ಕಾವ್ಯ ಸಂಕಲನಗಳಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಾಪ್ತವಾಗಿರುವುದಲ್ಲದೆ, ಖ್ಯಾತ ಕವಿ ಡಾ.ಸಿದ್ಧಯ್ಯ ಪುರಾಣಿಕರ 'ವಚನೋದ್ಯಾನ' ಸಂಕಲನಕ್ಕೆ ಮಧ್ಯಪ್ರದೇಶ ಸರ್ಕಾರದ ಪ್ರತಿಷ್ಠಿತ ಬಿಲ್ವಾರ್ ಪ್ರಶಸ್ತಿ ದೊರೆತಿರುವುದು ಅಭಿಮಾನದ ಸಂಗತಿಯಾಗಿದೆ. ಈ ಮೂಲಕ ಕನ್ನಡದ ವಚನ ಮಾಧ್ಯಮ ರಾಷ್ಟ್ರೀಯ ಮಟ್ಟದಲ್ಲಿಯೂ ವಿಸ್ತಾರವಾದ ಔನ್ನತ್ಯವನ್ನು ಪಡೆಯಿತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸಿದ್ಧಯ್ಯ ಪುರಾಣಿಕ, ಮಹಾದೇವ ಬಣಕಾರ, ಜ.ಚ.ನಿ ಮೊದಲಾದವರು ಆಧುನಿಕ ವಚನಗಳನ್ನು ರಚಿಸುವ ಮೂಲಕ ಆಧುನಿಕ ವಚನಸಾಹಿತ್ಯಕ್ಕೆ ಶ್ರೀಕಾರ ಹಾಕಿದರು. ಹೀಗೆ ವಚನ ನವ್ಯ, ಬಂಡಾಯ, ದಲಿತ ಸಾಹಿತ್ಯದ ಮಧ್ಯದಲ್ಲಿಯೂ ಸ್ವತಂತ್ರ ಪ್ರಕಾರವಾಗಿ ಹೊರಹೊಮ್ಮಿದ್ದು ಅದರ ಅಂತಃಸತ್ವಕ್ಕೆ ಸಾಕ್ಷಿಯಾಗಿದೆ.

ಆಧುನಿಕ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ವಚನಗಳು ಪ್ರಭಾವ ಇರುವುದನ್ನು

ಗಮನಿಸಬಹುದು. ನವೋದಯದ ನಂತರ ಬಂದ ನವ್ಯಕಾವ್ಯವಂತೂ ವಚನಗಳ ಭಾವ–ಭಾಷೆ–ಲಯವನ್ನು ಸಂಪೂರ್ಣವಾಗಿ ತನ್ನಾಗಿಸಿಕೊಂಡಿತು. ವಿ.ಕೃ. ಗೋಕಾಕರ 'ಸಮುದ್ರಗೀತಗಳು' ಸಂಕಲನದ ಮೇಲೆ ವಚನಗಳ ನೇರ ಪ್ರಭಾವವಿರುವುದನ್ನು ಗಿರಡ್ಡಿ ಗೋವಿಂದರಾಜ, ಜಿ.ಎಸ್. ಶಿವರುದ್ರಪ್ಪ ಮೊದಲಾದ ವಿದ್ವಾಂಸರು ಗುರುತಿಸಿದ್ದಾರೆ.

ಸಮುದ್ರಗೀತೆಗಳು 1936ರಲ್ಲಿ ಪ್ರಕಟವಾಯಿತು. ಇದು ನವೋದಯ ಉತ್ಕೃಷ್ಟ ಕಾಲ. ಉತ್ತರ ಕರ್ನಾಟಕದಲ್ಲಿ ಬೇಂದ್ರೆ, ಮಧುರಚೆನ್ನ, ಮುಗಳಿ ಮೊದಲಾದವರು ಅರವಿಂದರ ಪ್ರಭಾವಕ್ಕೆ ಒಳಗಾಗಿದ್ದರು. ಮಧುರ ಚೆನ್ನರು ಅರವಿಂದರ ಮತ್ತು ಶರಣರ ಕಾವ್ಯಪ್ರೇರಣೆಯಿಂದ ಸಮಸಮನಾಗಿ ಪ್ರೇರಣೆ ಪಡೆದುಕೊಂಡರು. ಮಧುರಚೆನ್ನರಂತೆ ವಿ.ಕೃ.ಗೋಕಾಕರು ಅರವಿಂದರಿಂದಲೂ ವಚನಕಾರರಿಂದಲೂ ಪ್ರೇರಣೆ ಪಡೆದುಕೊಂಡರು. ಅಂತೆಯೆ ಗೋಕಾಕರು ಮಧುರಚೆನ್ನರನ್ನು ಕುರಿತು ಒಂದು ಕವನದಲ್ಲಿ 'ನನ್ನ ದೃಷ್ಟಿಯೊಂದೆ; ಆದರೆಮ್ಮ ಅದೃಷ್ಟಬೇರೆ' ಎಂದು ಹೇಳಿದ್ದರು. ಗೋಕಾಕರು ಶರಣರ ವಚನಗಳಿಂದ ಪ್ರೇರಣೆ ಪಡೆದುಕೊಂಡ ವಿವರವನ್ನು ಜಿ.ಎಸ್. ಶಿವರುದ್ರಪ್ಪನವರು ಸ್ಪಷ್ಟವಾಗಿ ಗುರುತಿಸಿದ್ದಾರೆ.

ಸಮುದ್ರಗೀತಗಳು ಮೂಲಕ ಮುಕ್ತಛಂದೋ ರೂಪವೊಂದನ್ನು ಆವಿಷ್ಕಾರ ಮಾಡಿಕೊಂಡದ್ದು ತೀರಾ ಆಶ್ಚರ್ಯದ ಸಂಗತಿಯಾಗಿದೆ. "ಮೂಲತಃ ಗೋಕಾಕರ ಸಮುದ್ರ ಗೀತಗಳ ಮುಕ್ತಛಂದೋ ರೂಪಗಳ ಹಿಂದೆ, ಹನ್ನೆರಡನೆಯ ಶತಮಾನದ ಶಿವಶರಣರ ವಚನಗಳ ಪ್ರೇರಣೆಯಿದೆ ಎಂಬುದನ್ನು ಗುರುತಿಸುವುದು ಕಷ್ಟವೇನಲ್ಲ. ವಾಸ್ತವವಾಗಿ ಗೆಳೆಯರ ಗುಂಪಿನ ಕಾವ್ಯಮಾರ್ಗವು ಉತ್ತರ ಕರ್ನಾಟಕದ ಸಂತ ಸಾಹಿತ್ಯದಿಂದ ಹಾಗು ಅರವಿಂದರಿಂದ ಸಾಕಷ್ಟು ಪ್ರೇರಣೆಯನ್ನು ಪಡೆದುಕೊಂಡದ್ದು ನಿಜ. ಆದರೆ ಗೋಕಾಕರು ಆ ಗುಂಪಿನ ಅನೇಕರಂತೆ ಅರವಿಂದರ ಆಧ್ಯಾತ್ಮಿಕತೆಯನ್ನೂ ಪೂರ್ಣ ಮಾನವತ್ವದ ಕಲ್ಪನೆಯನ್ನೂ ಒಪ್ಪಿಕೊಂಡರೂ, ಕರ್ನಾಟಕದ ಶಿವಶರಣರ ವಚನ ಸಾಹಿತ್ಯದ ಮುಕ್ತ ಛಂದೋ ರೂಪವನ್ನು, ಹೊಸ ಕಾಲದ ಅಗತ್ಯಗಳಿಗೆ ಅಳವಡಿಸುವ ಪ್ರಯೋಗದಲ್ಲಿ ತೊಡಗಿದ್ದರಿಂದ, ಅವರು ಬರೆದ ಸಮುದ್ರ ಗೀತಗಳು ವಸ್ತು ಹಾಗು ಅಭಿವ್ಯಕ್ತಿಯ ದೃಷ್ಟಿಯಿಂದ ಒಂದು ಬಗೆಯ ಹೊಸತನವನ್ನು ಪಡೆದುಕೊಂಡಿವೆ. ಅವುಗಳ ಹೊಸತನ ಇಂದಿಗೂ ಮಾಸದಿದೆ."[22]

ವಸ್ತು ಹಾಗೂ ಛಂದೋರೂಪದ ದೃಷ್ಟಿಯಿಂದ ಗೋಕಾಕರ ಸಮುದ್ರ ಗೀತಗಳು ಇಂದಿಗೂ ತಮ್ಮ ಹೊಸತನ ಹಾಗು ಹೊಳಪನ್ನು ಉಳಿಸಿಕೊಂಡಿರುವುದಕ್ಕೆ ಕಾರಣ, ಅವು ನಿಜವಾದ ಪ್ರಯೋಗ ಪರಿಣತಿಯ ಅಭಿವ್ಯಕ್ತಿಗಳಾಗಿವೆ ಎನ್ನುವುದೇ ಆಗಿದೆ.

ಹೀಗೆ ನವೋದಯ ಕಾಲದ ಕುವೆಂಪು, ಬೇಂದ್ರೆ, ಎಸ್. ವಿ. ರಂಗಣ್ಣ, ಎಸ್.ವಿ. ಪರಮೇಶ್ವರಭಟ್ಟ, ಸಿದ್ಧಯ್ಯ ಪುರಾಣಿಕ, ಜ.ಚ.ನಿ., ಬೆಟಗೇರಿ ಕೃಷ್ಣಶರ್ಮ, ಡಿ.ಎಸ್. ಕರ್ಕಿ, ಎಸ್.ಡಿ. ಇಂಚಲ, ಬಿ.ಎ.ಸನದಿ, ಚೆನ್ನವೀರ ಕಣವಿ, ಜಿ.ಎಸ್. ಶಿವರುದ್ರಪ್ಪ ಮೊದಲಾದವರ ಕಾವ್ಯದ ಮೇಲೆ ವಚನಗಳ ಪ್ರೇರಣೆ–ಪ್ರಭಾವ–ಛಾಯೆ ಇರುವುದನ್ನು ಕಾಣಬಹುದು. ಈ ವಿಷಯವಾಗಿ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಇದೆ. ವಚನಗಳು ಆಧುನಿಕ ಕನ್ನಡ ಸಾಹಿತ್ಯದ ಕಾವ್ಯ, ನಾಟಕ, ಕಥೆ, ಕಾದಂಬರಿ ಮೊದಲಾದ ಎಲ್ಲ ಸೃಜನಶೀಲ ಪ್ರಕಾರಗಳ ಮೇಲೆ ಅತ್ಯಂತ ಗಾಢವೂ, ಸಮೃದ್ಧವೂ ಆದ ಪ್ರಭಾವ ಬೀರಿದೆ. ನವೋದಯ ಕಾಲ ಘಟ್ಟದಲ್ಲಿ ಹುಟ್ಟಿದ ಮತ್ತೊಂದು ವಿನೂತನ ಪ್ರಕಾರ ವೃತ್ತಿರಂಗಭೂಮಿ ನಾಟಕ ಸಾಹಿತ್ಯ. ಈ ವೃತ್ತಿರಂಗಭೂಮಿಯ ಬಸವೇಶ್ವರ ಮೊದಲಾದ ನಾಟಕಗಳು, ಆ ನಾಟಕಗಳಲ್ಲಿಯ ರಂಗಸಂಗೀತ ವಚನ

ಸಾಹಿತ್ಯದಿಂದ ರೂಪುಗೊಂಡಿವೆ ಎಂಬುದನ್ನು ಇನ್ನಷ್ಟು ಅಧ್ಯಯನಗಳಿಂದ ಸ್ಪಷ್ಟಪಡಿಸುವ ಕಾರ್ಯವಾಗಬೇಕಾಗಿದೆ.

ಒಟ್ಟಾರೆ ವಚನಗಳು 12ನೇ ಶತಮಾನಕ್ಕಿಂತಲೂ ಇಂದಿನ ಕನ್ನಡ ಸಾಹಿತ್ಯದ ಮೇಲೆ, ಜನರ ಜೀವನದ ಮೇಲೆ, ಸಮಾಜ ಸಂಸ್ಕೃತಿಗಳ ಮೇಲೆ ಅನನ್ಯವಾದ ಪ್ರಭಾವ ಬೀರಿದೆ. ಈ ಕುರಿತು ಖ್ಯಾತ ವಿಮರ್ಶಕರಾದ ಡಾ. ಗುರುಲಿಂಗ ಕಾಪಸೆ ಅವರು ಹೇಳುವ ಮಾತುಗಳು ಸ್ಮರಣೀಯವಾಗಿವೆ.

“ಸಾಂಸ್ಕೃತಿಕ ನೂತನ ಬದುಕನ್ನು ರೂಪಿಸಲು ಹೊರಟ ನವೋದಯದವರು, ಸಂಕೀರ್ಣ ಬದುಕಿನ ವಾಸ್ತವ ಜೀವನವನ್ನು ಅನಾವರಣಗೊಳಿಸಲು ಯತ್ನಿಸಿದ ನವ್ಯರು, ಜನಪರವಾಗಿ ಎಲ್ಲ ಬಗೆಯ ಸಮಾನತೆಗೆ ಹಂಬಲಿಸಿದ ಪ್ರಗತಿಶೀಲ, ದಲಿತ–ಬಂಡಾಯದವರು ತಮ್ಮ ತಮ್ಮ ರೀತಿಯಲ್ಲಿ ವಚನ ಮಾಧ್ಯಮವನ್ನು ಬಳಸಿಕೊಂಡರು. ಹೀಗಾಗಿ ಆಧುನಿಕ ವಚನಸಾಹಿತ್ಯ ನಮ್ಮ ಸಾಹಿತ್ಯದ ಒಂದು ಭಾಗವಾಗಿ ಬೆಳೆಯಿತು. ಸ್ವಾತಂತ್ರ್ಯ ಪೂರ್ವದ ಕಾಲದಲ್ಲಿ ಆಧ್ಯಾತ್ಮಿಕತೆಯ ಲೇಪನವನ್ನು ಅದು ಕೆಲಮಟ್ಟಿಗೆ ಪಡೆದುಕೊಂಡದ್ದೂ ಉಂಟು. ಸ್ವಾತಂತ್ರ್ಯ ನಂತರ ವಾಸ್ತವ ಬದುಕೇ ವಿಶೇಷವಾಗಿ ವಚನದ ವಸ್ತುವಾಗಿರುವುದನ್ನು ಕಾಣಬಹುದು”[23]

ನವೋದಯ ಕಾವ್ಯವು ಹಲವಾರು ಆಯಾಮಗಳಿಂದ ಪ್ರೇರಣೆ ಪಡೆದುಕೊಂಡು ರೂಪತಾಳಿದೆ ಎಂಬುದನ್ನು ಹೇಳಬಹುದು. 1.ವೇದ–ಉಪನಿಷತ್ತು, ಭಗವದ್ಗೀತೆ ಮೊದಲಾದ ಪ್ರಾಚೀನ ಸಂಸ್ಕೃತ ಸಾಹಿತ್ಯದಿಂದ, 2.ಪಂಪ ಭಾರತ, ವಿಕ್ರಮಾರ್ಜುನ ವಿಜಯ ಮೊದಲಾದ ಹಳಗನ್ನಡ ಸಾಹಿತ್ಯದಿಂದ, 3.ಬಸವಾದಿ ಶಿವಶರಣರ ವಚನ ಸಾಹಿತ್ಯದಿಂದ, 4. ದೇಶಿಯ ಪರಂಪರೆ ಅಥವಾ ಜಾನಪದ ನೆಲೆಯಿಂದ, 5.ಬಂಗಾಲದ ಟ್ಯಾಗೋರ, ಪಾಂಡಿಚೇರಿಯ ಅರವಿಂದರ ಸಾಹಿತ್ಯದಿಂದ. ಹೀಗೆ ಭಾರತೀಯ ಮೂಲದ ಈ ಸಾಹಿತ್ಯಗಳಿಂದಲ್ಲದೆ, ಆಂಗ್ಲ ಸಾಹಿತ್ಯದ ರೋಮ್ಯಾಂಟಿಜಮ್ ಎಂಬ ಹೊಸ ಕಾವ್ಯಪ್ರಕಾರದಿಂದಲೂ ನವೋದಯ ಕಾವ್ಯ ರೂಪುಗೊಂಡಿದೆ.

ಆಂಗ್ಲಸಾಹಿತ್ಯವೇ ನವೋದಯ ಕಾವ್ಯದ ಉಗಮಕ್ಕೆ ಕಾರಣವೆಂಬುದು ಬಹುತೇಕ ವಿದ್ವಾಂಸರ ಅಭಿಮತ. ಆದರೆ ಬೆಟಗೇರಿ ಕೃಷ್ಣಶರ್ಮರಂಥ ಕೆಲವು ಮಹತ್ವದ ಕವಿಗಳಿಗೆ ಇಂಗ್ಲಿಷ್ ಗಂಧಗಾಳಿಯೂ ಗೊತ್ತಿರಲಿಲ್ಲ. ಹೀಗಾಗಿ ಅವರು ಅಚ್ಚ ದೇಶಿಯ ಪ್ರತಿಭೆಗಳು. ಈ ದೇಶಿಯ ನೆಲೆಯ ನವೋದಯ ಕವಿಗಳು ವಚನಸಾಹಿತ್ಯದ ಧಾರೆಯನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಹೆಚ್ಚು ಬಳಸಿಕೊಂಡರು ಎಂಬುದು ನನ್ನ ಈ ಅಧ್ಯಯನದ ತಿಳುವಳಿಕೆಯಾಗಿದೆ.

ಕೊನೆ ಟಿಪ್ಪಣಿಗಳು:

1. ಕುವೆಂಪು, (2007), ಸಮಗ್ರ ಗದ್ಯ ಸಂಪುಟ-1 (ವಚನಕಾರ ಬಸವೇಶ್ವರ), ಮೈಸೂರು: ಉದಯರವಿ ಪ್ರಕಾಶನ, ಪು.ಸಂ. 298.
2. ಅದೇ, ಪು.ಸಂ. 299.
3. ಶಿವರುದ್ರಪ್ಪ ಜಿ.ಎಸ್., (1990), ಕುವೆಂಪು ಪುನರಾಲೋಕನ, ಬೆಂಗಳೂರು: ಪ್ರಸಾರಾಂಗ (ಬೆಂಗಳೂರು ವಿಶ್ವವಿದ್ಯಾಲಯ), ಪು.ಸಂ. 29.
4. ಅದೇ, ಪು.ಸಂ. 29.
5. ನಾಯಕ ಹಾ.ಮಾ., (1988), ಸಂಚಯ, ಮೈಸೂರು: ಗೀತಾ ಬುಕ್ ಹೌಸ್, ಪು.ಸಂ. 108.
6. ಕುವೆಂಪು, (1946), ಕಿಂಕಿಣಿ, ಮೈಸೂರು: ಉದಯರವಿ ಪ್ರಕಾಶನ, ಪು.ಸಂ. (ವಚನ. 7).
7. ಅದೇ, ಪು.ಸಂ. (ವಚನ. 11).
8. ಅದೇ, ಪು.ಸಂ. (ವಚನ. 36).
9. ನಾಯಕ ಹಾ.ಮಾ., (1988), ಸಂಚಯ, ಮೈಸೂರು: ಗೀತಾ ಬುಕ್ ಹೌಸ್, ಪು.ಸಂ. 116.
10. ಗುರುಲಿಂಗ ಕಾಪಸೆ, (1980), ಮಧುರಚೆನ್ನ: ಜೀವನ ಹಾಗೂ ಕೃತಿಗಳ ಸಮೀಕ್ಷೆ, ಧಾರವಾಡ: ಪ್ರಸಾರಾಂಗ (ಕರ್ನಾಟಕ ವಿಶ್ವವಿದ್ಯಾಲಯ), ಪು.ಸಂ. 231.
11. ಅದೇ, ಪು.ಸಂ. 231.
12. ಮಧುರಚೆನ್ನ, (1933), ನನ್ನನಲ್ಲ, ಧಾರವಾಡ: ಸಮಾಜ ಪುಸ್ತಕಾಲಯ, ಪು.ಸಂ. 8.
13. ಗುರುಲಿಂಗ ಕಾಪಸೆ, (1980), ಮಧುರಚೆನ್ನ: ಜೀವನ ಹಾಗೂ ಕೃತಿಗಳ ಸಮೀಕ್ಷೆ, ಧಾರವಾಡ: ಪ್ರಸಾರಾಂಗ (ಕರ್ನಾಟಕ ವಿಶ್ವವಿದ್ಯಾಲಯ), ಪು.ಸಂ. 226.
14. ಬೇಂದ್ರೆ ದ.ರಾ., (1969), ಸಾಹಿತ್ಯದ ವಿರಾಟ ಸ್ವರೂಪ, ಧಾರವಾಡ: ಸಮಾಜ ಪುಸ್ತಕಾಲಯ, ಪು.ಸಂ. 196.
15. ಆಮೂರ ಜಿ.ಎಸ್., (1992), ಭುವನದ ಭಾಗ್ಯ, ಬೆಂಗಳೂರು: ಸಿ.ವಿ.ಜಿ. ಪಬ್ಲಿಕೇಷನ್ಸ್, ಪು.ಸಂ. 260.
16. ಗಿರಡ್ಡಿ ಗೋವಿಂದರಾಜ, (1989), ಕಾವ್ಯವನ್ನು ಕುರಿತು, ಧಾರವಾಡ: ಸೃಷ್ಟಿ ಪ್ರಕಾಶನ, ಪು.ಸಂ. 318.
17. ಬೇಂದ್ರೆ ದ.ರಾ., (1969), ಸಾಹಿತ್ಯದ ವಿರಾಟ ಸ್ವರೂಪ, ಧಾರವಾಡ: ಸಮಾಜ ಪುಸ್ತಕಾಲಯ, ಪು.ಸಂ. 198.
18. ಬೇಂದ್ರೆ ದ.ರಾ., (1938), ಉಯ್ಯಾಲೆ, ಧಾರವಾಡ: ಸಮಾಜ ಪುಸ್ತಕಾಲಯ, ಪು.ಸಂ. ಮುನ್ನುಡಿ.
19. ಗಿರಡ್ಡಿ ಗೋವಿಂದರಾಜ, (2007), ಕನ್ನಡ ಕಾವ್ಯ ಪರಂಪರೆ ಮತ್ತು ಬೇಂದ್ರೆಯವರ ಕಾವ್ಯ, ಧಾರವಾಡ: ಸೃಷ್ಟಿ ಪ್ರಕಾಶನ, ಪು.ಸಂ. 35.
20. ಗಿರಡ್ಡಿ ಗೋವಿಂದರಾಜ, (1989), ಕಾವ್ಯವನ್ನು ಕುರಿತು, ಧಾರವಾಡ: ಸೃಷ್ಟಿ ಪ್ರಕಾಶನ, ಪು.ಸಂ. 257.
21. ರಂಗಣ್ಣ ಎಸ್.ವಿ., (1963), ರಂಗಬಿನ್ನಪ, ಮೈಸೂರು: ಶಾರದಾ ಮಂದಿರ, ಪು.ಸಂ. 4-5.
22. ಶಿವರುದ್ರಪ್ಪ ಜಿ.ಎಸ್., (2007), ಸಮಗ್ರ ಗದ್ಯ-2, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ಪು.ಸಂ. 434-435.
23. ಗುರುಲಿಂಗ ಕಾಪಸೆ, (2001), ವಚನಸಾಹಿತ್ಯ ಮತ್ತು ಆಧುನಿಕ ಕನ್ನಡ ಸಾಹಿತ್ಯ ಮುಖಾಮುಖಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ಪು.ಸಂ. 2-3.